ದಿಃ 14-7-2015ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಬಿ.ಆರ್ ವಕೀಲರಿಂದಃ

ನನಗೆ ಹುಷಾರಿಲ್ಲದ ಕಾರಣ ನಾನು ಕಳೆದ ಮುದ್ದತ್ತು ದಿನಾಂಕದಂದು ನಾನು ನ್ಯಾಯಾಲಯಕ್ಕೆ ಬರಲು ಆಗಲಿಲ್ಲ. ಪ್ರತಿವಾದಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ನಾನು ಚೆನ್ನಾಗಿದ್ದರೂ ಸಹಾ ಕಳೆದ ದಿನಾಂಕದಂದು ನ್ಯಾಯಾಲಯಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 04.03.2002 ರಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣಪತ್ರವನ್ನು ನಾನು ನನ್ನ ಹೆಂಡತಿ ಅಂದರೆ ಈ ಕೇಸಿನ 4ನೇ ವಾದಿಗೆ ತೋರಿಸಿಲ್ಲ. ಆದರೆ, ನಾನು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿರುವ ವಿಚಾರ ನನ್ನ ಹೆಂಡತಿಗೆ ಗೊತ್ತು. ಅದೇ ರೀತಿ ಬೇರೆ ವಾದಿಗಳಿಗೆ ಸಹಾ ಗೊತ್ತು. ನಾನು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿರುವ ವಿಚಾರ ಗೊತ್ತಾದ ನಂತರ ಅದನ್ನು ತಾನು ನೋಡಬೇಕು ಎಂದು ನನ್ನ ಹೆಂಡತಿ ನನಗೆ ಕೇಳಲಿಲ್ಲ. ದಿಃ 04.03.2002 ರಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಾನು ಓದಿರುವುದಿಲ್ಲ. ಅದನ್ನು ನನ್ನ ವಕೀಲರು ಸಿದ್ಧಪಡಿಸಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಮರಣಶಾಸನದ ಬಗ್ಗೆ ಬರೆದಿರುವುದು ತಪ್ಪಿರುತ್ತದೆ ಎಂದು ನನಗೆ ಇತ್ತೀಚೆಗೆ ಗೊತ್ತಾಗಿರುತ್ತದೆ. ಅಣ್ಣಪ್ಪ ಶೆಟ್ಟಿ ಎಂಬುವವರ ಪರಿಚಯ ನನಗೆ ಇಲ್ಲ ಎಂದು ನನ್ನ ವಕೀಲರಿಗೆ ನಾನು ತಿಳಿಸಿದ್ದೆ. ನಾನು ಈ ಕೇಸಿನಲ್ಲಿ ಸಾಕ್ಷಿಯಾಗಿದ್ದರೂ ಸಹಾ ಕೇಸಿನ ಮುದ್ದತ್ತು ದಿನಾಂಕಗಳನ್ನು ತಿಳಿಸುವ ಸಲುವಾಗಿ ನಾಗರಾಜ ವಕೀಲರನ್ನು ನನ್ನ ಪರವಾಗಿ ನೇಮಿಸಿಕೊಂಡಿದ್ದೇನೆ.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ವಾದಿ ಪರ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ.